





ಹೊಸ ತಲೆಮಾರಿನ ಜಾಣಜಾಣೆಯರ ಡಾರ್ಲಿಂಗ್‌ಗಳು — ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ್



ರಾಜಕಾರಣಕ್ಕೆ ಸಮಾಜವಾದವನ್ನು ಬೆಸೆದ ಶಾಂತವೇರಿ ಗೋಪಾಲಗೌಡ

## ಕುವೆಂಪು, ಗೋಪಾಲಗೌಡ, ತೇಜಸ್ವಿ, ಲಂಕೇಶ್

ಗೋಪಾಲಗೌಡರು ರೈತ ಸಭೆಗಳಲ್ಲಿ ಕುವೆಂಪು ಕವಿತೆಗಳನ್ನು ಬಳಸುತ್ತಿದ್ದುದನ್ನು ಕುರಿತ ಪ್ರಸಂಗವೊಂದು ತೇಜಸ್ವಿಯವರ 'ಅಣ್ಣನ ನೆನಪು' ಪುಸ್ತಕದಲ್ಲಿದೆ. ತೇಜಸ್ವಿ ಒಮ್ಮೆ ಕುವೆಂಪು ಅವರ ಜೊತೆ ಕುಪ್ಪಳಿ ಬಳಿಯ ಇಂಗ್ಲಾದಿಗೆ ಹೋಗುತ್ತಾರೆ. ಆಗಿನ್ನೂ ತೇಜಸ್ವಿಗೆ ಗೋಪಾಲಗೌಡರ ಪರಿಚಯ ಇರಲಿಲ್ಲ. ಈ ಕುರಿತು ತೇಜಸ್ವಿ ಬರೆಯುತ್ತಾರೆ:

'ಅಲ್ಲಿ ಶ್ರೀ ಮಾನಪ್ಪನವರೂ ವಿಜಯದೇವ ಅವರೂ ಅಣ್ಣನ ಜೊತೆ ಮಾತಾಡುತ್ತಾ, 'ಗೋಪಾಲಗೌಡ ಚಳವಳಿಯಲ್ಲಿ ಹಾಗೂ ಇತರೆಡೆಗಳಲ್ಲಿ ಭಾಷಣ ಮಾಡುತ್ತಾ ನಿಮ್ಮ 'ಕಲ್ಕಿ, 'ನೇಗಿಲಯೋಗಿ' ಮುಂತಾದ ಪದ್ಯಗಳನ್ನೇ ಉಪಯೋಗಿಸಿ ಉದಾಹರಣೆ ಕೊಡುತ್ತಾನಂತೆ' ಎಂದು ಅಣ್ಣನ ಪದ್ಯಗಳನ್ನು ಗೋಪಾಲಗೌಡರು ದುರುಪಯೋಗ ಮಾಡುತ್ತಿದ್ದಾರೆ ಎನ್ನುವಂತೆ ಹೇಳಿದ್ದು ನೆನಪಿದೆ. ಇದರಿಂದ ನನಗೆ ಗೋಪಾಲಗೌಡರ ಬಗ್ಗೆ ಕುತೂಹಲವೂ ಸ್ವಲ್ಪ ಸದಭಿಪ್ರಾಯವೂ ಪಾರಂಭವಾಯ್ತು... ಗೋಪಾಲಗೌಡ ಕಥೆ, ಕವನಗಳನ್ನು ಓದುವ ಮನುಷ್ಯನಾದರೆ, ರಾಜಕೀಯಕ್ಕೆ ಅಣ್ಣನ ಕವಿತೆಗಳನ್ನು ಬಳಸುವಷ್ಟು ಸೂಕ್ಷ್ಮಜ್ಞನಾದರೆ ಈತ ವಿಶಿಷ್ಟ ರೀತಿಯ ರಾಜಕಾರಣಿಯೇ ಸರಿ ಎಂದು ಅನ್ನಿಸಿತ್ತು.'

ಶಿವಮೊಗ್ಗದಲ್ಲಿ ಗೋಪಾಲಗೌಡ ಹಾಗೂ ಸಮಾಜವಾದಿಗಳು ತಮ್ಮ ಪ್ರಜ್ಞೆಯನ್ನು ವಿಸ್ತರಿಸಿದ ಬಗೆಯನ್ನು ಲಂಕೇಶ್ 'ಹುಳಿ ಮಾವಿನಮರ'ದಲ್ಲಿ ದಾಖಲಿಸುತ್ತಾರೆ:

'ಒಂದೊಂದು ಪೆಗ್ ಇಳಿದಂತೆಯೂ ಗೋಪಾಲ್, ಅಣ್ಣಯ್ಯ, ಧರ್ಮಪ್ಪ ಮುಂತಾದವರು ಚರ್ಚೆಯನ್ನು ಮಹಾನ್ ಸಂಗೀತದ ಮಟ್ಟಕ್ಕೆ ಏರಿಸುತ್ತಿದ್ದರು. ಅವರ ಅನುಭವ, ಪ್ರತಿಭೆ, ಹತಾಶೆಯೆಲ್ಲ ಪೂರ್ಣ ಅಭಿವ್ಯಕ್ತಿ ಪಡೆದು, ಅಲ್ಲಿರುತ್ತಿದ್ದ ನನ್ನಂಥವರಿಗೆ ಬದುಕಿನ ಅನಿರೀಕ್ಷಿತ ಸ್ತರಗಳು ಗೋಚರಿಸುತ್ತಿದ್ದವು. ಜಾತಿ, ಭಾಷೆ, ಹಣ, ವೈಭವ ಎಲ್ಲವನ್ನೂ ಮೀರಿದ ಸುಖೀರಾಜ್ಯವೊಂದು ಸೃಷ್ಟಿಯಾಗುತ್ತಿತ್ತು. ಆಗ ನಮ್ಮ ಸಮಾಜವಾದಿ ಪಕ್ಷದಲ್ಲಿದ್ದ ಕಮ್ಮಾರರು, ಕ್ಷೌರಿಕರು, ಮೋಚಿಗಳು ಮತ್ತು ರೈತರು, ಕಾರ್ಮಿಕರು... ಎಲ್ಲರೂ ಒಂದಾಗಿ ಅದ್ಭುತ ಜಗತ್ತೊಂದು ಸೃಷ್ಟಿಯಾಗುತ್ತಿತ್ತು. ಜಾತಿಗಳನ್ನು ಮರೆತು ಜನರನ್ನು ತಿಳಿದುಕೊಳ್ಳುವ, ಪ್ರೀತಿಸುವ, ಒಟ್ಟಾಗಿ ಸೃಷ್ಟಿಸುವ ರೋಮಾಂಚನ ಆ ದಿನಗಳಿಂದ ನನ್ನಲ್ಲಿ ಆರಂಭವಾಗಿರಬೇಕೆಂದು ನನಗೆನ್ನಿಸುತ್ತದೆ.'

ರೈತನ ಘನತೆಯನ್ನು ಚಿತ್ರಿಸುವ 'ನೇಗಿಲಯೋಗಿ' ರೈತಗೀತೆ, ಒಡಕಲು ರಾಷ್ಟ್ರೀಯತೆಯನ್ನು ನಿರಾಕರಿಸಿದ 'ಜಯ ಹೇ ಕರ್ನಾಟಕ ಮಾತೆ' ನಾಡಗೀತೆ ಹಾಗೂ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಬರಹದ ಮೂಲಕ ವಿದ್ಯಾರ್ಥಿಗಳಲ್ಲಿ ಎಚ್ಚರವನ್ನು ಮೂಡಿಸಿದ ಕವಿ ಕುವೆಂಪು

ರಾಜಕೀಯ ಚಿಂತನೆ, ರಂಗಸಂಸ್ಕೃತಿಗಳಲ್ಲೂ ಸಮಾಜವಾದ ಬೆರೆಯತೊಡಗಿತು. ಸಿಜಿಕೆ, ಪ್ರಸನ್ನ, ಗಂಗಾಧರಸ್ವಾಮಿ, ರಘುನಂದನ್, ಬಸವಲಿಂಗಯ್ಯ ಥರದ ನಿರ್ದೇಶಕರು, ಲಿಂಗದೇವರು ಹಳೇಮನೆ, ಶಿವಪ್ರಕಾಶರಂಥ ನಾಟಕಕಾರರಿಂದ ಮಾರ್ಕ್ಸ್‌ವಾದಿ ನೋಟ ರಂಗಸಂಸ್ಕೃತಿಯ ಭಾಗವಾಗತೊಡಗಿತು. ಇದೆಲ್ಲದರ ಫಲವಾಗಿ ಹೊಸ ಎಚ್ಚರದ ನೂರಾರು ನಟನಟಿಯರು, ಪ್ರೇಕ್ಷಕರು ಸೃಷ್ಟಿಯಾಗತೊಡಗಿದರು. ರಾಜ್ಯದ ಎಲ್ಲೆಡೆ ನಡೆದ 'ಸಮುದಾಯ' ಜಾಥಾ ಒಡವರ, ಕಾರ್ಮಿಕರ ಸಂಗಾತಿಯಾಗಿ ಸಮಾನತೆಯ ಚಿಂತನೆಯನ್ನು ವಿಸ್ತರಿಸುತ್ತಾ ರಾಜಕೀಯ ಪ್ರಜ್ಞೆಯನ್ನು ಬೆಳೆಸತೊಡಗಿತು. ಬೀದಿ ನಾಟಕಗಳು ಜನಪರ ಚಳವಳಿಯ ಭಾಗವಾಗತೊಡಗಿದವು. ಗಂಭೀರ ಸಮಾಜ ವಿಮರ್ಶೆಯ ಮೂಲಕ ಪ್ರೇಕ್ಷಕರನ್ನು ಎಚ್ಚರಿಸಿದ ಶ್ರೀರಂಗ, ಕಾರ್ನಾಡ, ಲಂಕೇಶ್, ಕಂಬಾರರಂಥ ನಾಟಕಕಾರರು; ತೀಕ್ಷ್ಣ ವಿಮರ್ಶಾ ಪ್ರಜ್ಞೆಯ ನಟ ನಟಿಯರನ್ನು, ಉತ್ತಮ ಅಭಿರುಚಿಯ ಪ್ರೇಕ್ಷಕರನ್ನು ರೂಪಿಸಿದ ನೀನಾಸಂ, ಎನ್.ಎಸ್.ಡಿ. ಹಾಗೂ ಇಂಥ ಹತ್ತಾರು ರಂಗಸಂಸ್ಥೆಗಳ ಕೊಡುಗೆ ಕೂಡ ಇಷ್ಟೇ ಮುಖ್ಯವಾದುದು.

ಅದೇ ಕಾಲದ ತುರ್ತುಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಹುಟ್ಟಿದ ಹೊಸ ರಾಜಕೀಯ ಪ್ರಜ್ಞೆ, ಸಾಮಾಜಿಕ — ಸಾಂಸ್ಕೃತಿಕ ಎಚ್ಚರಗಳು ಕೂಡ ಇಷ್ಟೇ ಮಹತ್ವದ್ದಾಗಿವೆ. ಚಂದ್ರಶೇಖರ ಪಾಟೀಲರ 'ಗಾಂಧೀ ಸ್ಮರಣೆ', ಮಂಗ್ಳೂರ ವಿಜಯ, ವಿಜಯ ಪಾಟೀಲ ಸಂಪಾದಿಸಿದ 'ಕಪ್ಪು ಜನರ ಕೆಂಪು ಕಾವ್ಯ', ಕಿ.ರಂ. ನಾಗರಾಜ್ ಸಂಪಾದಿಸಿದ 'ಆಪತ್ಕಾಲೀನ ಕವಿತೆಗಳು' ಥರದ ಕೃತಿಗಳ ಚಾರಿತ್ರಿಕ ಮಹತ್ವವನ್ನು ಇಲ್ಲಿ ದಾಖಲಿಸಲೇಬೇಕು. ಈ ಕಾಲದಲ್ಲೇ ಬಿ. ಬಸವಲಿಂಗಪ್ಪನವರ ಸಿಟ್ಟಿನ ದಿಟ್ಟ ಮಾತುಗಳ ಜೊತೆಜೊತೆಗೇ ದಲಿತರ ಆತ್ಮಗೌರವದ ರಾಜಕಾರಣ, ಅಂಬೇಡ್ಕರ್‌ವಾದಿ ಚಿಂತನೆ, ಬೌದ್ಧಮಾರ್ಗ, ದಲಿತಕೇಂದ್ರಿತ ಚಿಂತನೆಗಳು ಕನ್ನಡ ಸಂಸ್ಕೃತಿಯನ್ನು ಪ್ರವೇಶಿಸಿದ್ದವು. ಸ್ತ್ರೀವಾದಿ ಚಿಂತನೆಗಳು ಕೇಂದ್ರಕ್ಕೆ ಬರತೊಡಗಿದ್ದವು. ವೈಚಾರಿಕ ಆಂದೋಲನ ಬೆಳೆಯುತ್ತಿತ್ತು.

ಹೀಗೆ ಕರ್ನಾಟಕದಲ್ಲಿ ಏಕಕಾಲಕ್ಕೆ ಮಾರ್ಕ್ಸ್, ಅಂಬೇಡ್ಕರ್, ವಿಚಾರವಾದ, ಸಮಾಜವಾದ, ಸ್ತ್ರೀವಾದ ಎಲ್ಲವೂ ಬೆರೆಯತೊಡಗಿ ಹೊಸ ಬಗೆಯ ಸಮಾನತಾ ಪ್ರಜ್ಞೆಯೊಂದು ರೂಪುಗೊಳ್ಳತೊಡಗಿತು. ದಲಿತ ಚಳವಳಿ, ದಲಿತ ಸಂಘರ್ಷಗಳ ಜೊತೆಗೆ ದಲಿತ ಸಾಹಿತ್ಯವೂ ಬೆಳೆದು ಈ ಸಮಾನತಾ ಪ್ರಜ್ಞೆ ಇನ್ನಷ್ಟು ವ್ಯಾಪಕವಾಯಿತು.